# ವೈದ್ಯರೇಕೆ ಹಳ್ಳಿಗಳಿಗೆ ಹೋಗಲ್ಲ?



ಚಿತ್ರ: ಚಂದ್ರಹಾಸ ಕೋಟೆಕಾರ್

**ಲಕ್ಷಾಂತರ ರೂಪಾಯಿ ಸುರಿದು ವೈದ್ಯಕೀಯ ಪದವಿ, ಸ್ನಾತಕೋತ್ತರ ಪದವಿ ಪಡೆದವರು ಶಿಕ್ಷಣ ಸಾಲ ತೀರಿಸುವತ್ತ ಚಿತ್ತ ಹರಿಸಿರುತ್ತಾರೆ. ಹಾಗಿರುವಾಗ ಸೌಲಭ್ಯಗಳಿಲ್ಲದ, ಹೆಚ್ಚು ರಿಸ್ಕ್ ಇರುವ ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಮಾಡುವುದು ಅವರಿಗೆ ಆಕರ್ಷಕ ಎನ್ನಿಸುವುದಿಲ್ಲ. ಇದಕ್ಕೆ ಪರಿಹಾರವೇನು?**

■ ಡಾ. ಪಿ.ಬಿ.ಕಲ್ಲಾಪೂರ

ವೈದ್ಯರು ಹಳ್ಳಿಗಳಿಗೇಕೆ ಹೋಗುವುದಿಲ್ಲ? ಎನ್ನುವ ದೊಡ್ಡ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟ. ಇದಕ್ಕೆ ಕಾರಣಗಳು ಅನೇಕ. ಈ ಕಾರಣಗಳ ಕುರಿತು ಯಾರೂ ಯೋಚಿಸುವುದೇ ಇಲ್ಲ ಎನ್ನುವುದು ವಿಷಾದದ ಸಂಗತಿ.

ಈ ವಿಷಯದ ಕುರಿತಾದ ಅಂಕಿ ಸಂಖ್ಯೆಗಳೇನೇ ಇರಲಿ, ಇವುಗಳ ಹಿಂದಿನ ಕಾರಣ ಕುರಿತು, ಸರಕಾರ, ರಾಜಕಾರಣಿಗಳು, ಗ್ರಾಮಾಂತರ ಜನರು ಮತ್ತು ಪ್ರಜ್ಞಾವಂತ ನಾಗರಿಕರು ಗಂಭೀರವಾಗಿ ಯೋಚಿಸಲೇಬೇಕಿದೆ. ಇಲ್ಲಿ ಕೆಲವು ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು:

## ದುಬಾರಿ ವೈದ್ಯಕೀಯ ಶಿಕ್ಷಣ

ಇಂದಿನ ವೈದ್ಯಕೀಯ ಶಿಕ್ಷಣ ಮೊದಲಿನಂತಿಲ್ಲ. ಈ ಹಿಂದೆ ಸುಮಾರು 10 ರಿಂದ 12 ಸಾವಿರ ರೂಪಾಯಿ ಖರ್ಚು ಮಾಡಿದರೆ ಎಂ.ಬಿ.ಬಿ.ಎಸ್. ಪದವಿ ಮುಗಿಸಲು ಸಾಕಾಗುತ್ತಿತ್ತು. ಅಲ್ಲದೆ ಈಗಿನಂತೆ ಸಿಇಟಿ ಮೊದಲಾದ ಪ್ರವೇಶ ಪರೀಕ್ಷೆಗಳಾಗಲಿ, ಕೌನ್ಸೆಲಿಂಗ್ ವಿಧಾನವಾಗಲಿ ಇರಲೇ ಇಲ್ಲ. ಪಿಯುಸಿ ಪಾಸಾದವರಿಗೆ ಅಷ್ಟೇ ಅಲ್ಲ, ಆಗ ಬಿಎಸ್‌ಸಿ ಪದವಿ ಪಡೆದವರಿಗೂ ಬಿಎಸ್‌ಸಿ ಕೋಟಾದಲ್ಲಿ ಸಹ ಎಂಬಿಬಿಎಸ್ ಸೀಟು ಲಭ್ಯವಾಗಿರುತ್ತಿತ್ತು. ಈಗಿನಂತೆ